# ಲಯನ್ ಮಾನ್ಯುಮೆಂಟ್

ಸ್ವಿಝರ್ಲಂಡಿನ ಲ್ಯುಸ್ಲರ್ನ್‌ನಲ್ಲಿರುವ ಲಯನ್ ಮಾನ್ಯುಮೆಂಟ್ ಪ್ರವಾಸಿಗರ ಮನಸ್ಸನ್ನು ಬಹಳವಾಗಿ ಕಲಕುತ್ತದೆ. ಇತಿಹಾಸದಲ್ಲಿ ಅನೇಕ ಹತ್ಯಾಕಾಂಡಗಳು, ಭೀಕರ ನರಮೇಧಗಳು ಆಗಿಹೋಗಿವೆ. ಅಂತಹ ಒಂದು ಸನ್ನಿವೇಶವನ್ನು ವಿವರಿಸುವ ಈ ಸ್ಮಾರಕ ಸ್ವಿಸ್ ಯೋಧರ ಧೀರ ಸಾವನ್ನು ನೆನಪಿಸುತ್ತದೆ.

ಸ್ವಿಝರ್ಲಂಡ್ ತನ್ನ ಬಾಡಿಗೆ ಯೋಧರನ್ನು ಹಲವು ದೇಶಗಳಿಗೆ ಕಳುಹಿಸುತ್ತಿತ್ತು. ಹೀಗೆ ಬಂದ ಸಾವಿರಾರು ಯೋಧರು ಅಂದು ಪ್ಯಾರಿಸ್‌ನ ಟ್ಯುಲರೀಸ್ ಅರಮನೆಯಲ್ಲಿದ್ದ 16ನೆಯ ಲೂಯಿಯ ಕುಟುಂಬದ ರಕ್ಷಣೆ ಮಾಡುತ್ತಿದ್ದರು. ಫ್ರೆಂಚ್ ಕ್ರಾಂತಿಯಲ್ಲಿ ಟ್ಯುಲರೀಸ್ ಮೇಲೆ ದಾಳಿ ನಡೆದಾಗ ಧೈರ್ಯ ಮತ್ತು ವಿಧೇಯತೆಗೆ ಹೆಸರಾದ ಈ ಯೋಧರನ್ನು ಅಮಾನುಷವಾಗಿ ಈಟಿಯಿಂದ ಚುಚ್ಚಿ ಕೊಲ್ಲಲಾಯಿತು. ಈ ಹೃದಯ ವಿದ್ರಾವಕ ಘಟನೆಯಲ್ಲಿ ಸುಮಾರು 360 ಯೋಧರು ಹುತಾತ್ಮರಾಗಿ ಇನ್ನೂ 360 ಯೋಧರು ಉಳಿದುಕೊಂಡರು ಎನ್ನುತ್ತದೆ ಇತಿಹಾಸ.

ಈ ಅಮಾನವೀಯ ಘಟನೆ 1792ರ ಆಗಸ್ಟ್ 10ರಂದು ನಡೆಯಿತು. ಈ ರಕ್ತಪಾತದಲ್ಲಿ ಹುತಾತ್ಮರಾದ ಯೋಧರ ಸ್ಮರಣೆಗಾಗಿ ಚಪ್ಪಟೆಯಾಕಾರದ ದೊಡ್ಡ ಮರಳುಗಲ್ಲಿನ ಬಂಡೆಯಲ್ಲಿ ಶಿಲ್ಪವನ್ನು ಕೆತ್ತಲಾಗಿದೆ. ಮರಗಿಡಗಳಿಂದ ಆವೃತವಾದ ಪ್ರದೇಶದಲ್ಲಿ 1820–21ರಲ್ಲಿ ಡೆನ್ಮಾರ್ಕಿನ ಶಿಲ್ಪಿ ಬೆರ್ಟೆಲ್ ಥಾಮಸ್ ಲ್ಯಾಟಿನ್ ಲಿಪಿಯಲ್ಲಿ ಇದನ್ನು ಕೆತ್ತಿದ್ದಾನೆ. ಇದರ ಮುಂದೆ ಒಂದು ಚಿಕ್ಕ ಕೊಳವಿದೆ. ಸ್ಮಾರಕದ ಮೇಲೆ 'ಸ್ವಿಸ್ ಯೋಧರ ಧೈರ್ಯ ಮತ್ತು ವಿಧೇಯತೆ' ಎಂದು ಬರೆಯಲಾಗಿದೆ.

ಈ ಶಿಲ್ಪದಲ್ಲಿ ಅತ್ಯಂತ ದುಃಖಪೂರಿತವಾದ ನೋವಿನ ಸಂದರ್ಭ ಅಪೂರ್ವವೆಂಬಂತೆ ಕಲೆಯಲ್ಲಿ ಮೂಡಿದೆ. ಸಿಂಹದ ಮುಖದಲ್ಲಿ ಸಾಯುವ ಸ್ಥಿತಿಯ ತೀವ್ರವಾದ ನೋವು ವ್ಯಕ್ತವಾಗಿದೆ. ಅಸಹಾಯಕವಾಗಿ ಬಿದ್ದಿರುವ ಸಿಂಹದ ಮುಂಗಾಲು ಫ್ರೆಂಚ್ ರಾಜವಂಶದ ಚಿನ್ಹೆಯಿರುವ ಗುರಾಣಿಯ ಮೇಲಿದೆ. ಅದರ ಪಕ್ಕದಲ್ಲಿ ಸ್ವಿಸ್ ಚಿನ್ಹೆಯಿರುವ ಗುರಾಣಿಯೂ ಇದೆ. ಈಟಿಯಿಂದ ಚುಚ್ಚಿಸಿಕೊಂಡು ಸಾವಿನ ಹಂತದಲ್ಲಿರುವ ಸಿಂಹ, ಅದರ ಕೇಸರ, ಬಾಲ ಎಲ್ಲವುಗಳ ಕೆತ್ತನೆ ಸುಂದರವಾಗಿದೆ.

ಅಮೆರಿಕದ ಸುಪ್ರಸಿದ್ಧ ಬರಹಗಾರ ಮಾರ್ಕ್ ಟ್ವೈನ್ ಇದನ್ನು ಅದ್ಭುತವಾಗಿ ವರ್ಣಿಸುತ್ತಾರೆ– 'ಬಂಡೆಯ ಮೇಲೆ ಕೆತ್ತಲಾಗಿರುವ ಸಿಂಹವು ತನ್ನ ಗುಹೆಯಲ್ಲಿ ಅಡ್ಡವಾಗಿ ಮಲಗಿದೆ. ಮುಖ ಕೆಳಗೆ ಬಾಗಿದೆ. ಅದರ ಆಕಾರ ದೊಡ್ಡದಾಗಿದ್ದು ಭಾವ ಗೌರವಯುತವಾಗಿದೆ, ಆದರ್ಶಪ್ರಾಯವಾಗಿದೆ. ಅದರ ತಲೆ ಬಾಗಿದ್ದು ಮುರಿದ ಈಟಿ ಅದರ ಕುತ್ತಿಗೆಗೆ ಸೇರಿಕೊಂಡಿದೆ. ಫ್ರಾನ್ಸ್ ರಾಜ ಚಿನ್ಹೆಯಾದ ಕಮಲದ ಉದ್ದಕ್ಕೂ ಅದರ ಕೈ ಹರಡಿಕೊಂಡಿದೆ. ಬಂಡೆಯ ಮೇಲೆ ಬಳ್ಳಿಗಳು ಇಳಿಬಿದ್ದಿದ್ದು ಗಾಳಿಯಲ್ಲಿ ಹಾರಾಡುತ್ತಿವೆ. ಅದರ ಕೆಳಗೆ ಕೊಳವಿದ್ದು, ಆ ತಿಳಿಕೊಳಕ್ಕೆ ಮೇಲಿನಿಂದ ನೀರು ಹರಿದುಬರುತ್ತಿದೆ. ಆ ಕೊಳದ ನೀರಿನಲ್ಲಿ ಕಮಲದೊಂದಿಗೆ ಸಿಂಹವು ಹೊಳೆಯುತ್ತಿದೆ. ಗಾಯಗೊಂಡಿರುವ ಸಿಂಹ ಅತೀವ ದುಃಖದಲ್ಲಿದೆ. ಇದು ವಿಶ್ವದ ಎಲ್ಲರ ಗಮನ ಸೆಳೆವ ಸ್ಮಾರಕ.'

ಹೃದಯ ಹಿಂಡುವಂತಹ ಈ ದೃಶ್ಯವನ್ನು ಬಂಡೆಯ ಮೇಲೆ ಗಮನಿಸಿ ನೋಡುತ್ತಿದ್ದಂತೆಯೇ ಸಿಂಹದ ಹೊರಮೈಯಲ್ಲಿ ನಮಗೊಂದು ಅಚ್ಚರಿ ಕಾಣುತ್ತದೆ! ನೀವೂ ನೋಡಿ. ಅದು ಹಂದಿಯ ಚಿತ್ರ! ಇದರ ಬಗ್ಗೆ ಒಂದು ಕುತೂಹಲಕಾರಿ ಕಥೆಯಿದೆ. ಈ ಕಥೆಯನ್ನು ಕೇಳಿದವರಾರೂ ಕೊಟ್ಟ ಮಾತಿಗೆ ತಪ್ಪಲಾರರು. ಆ ಕಥೆ ಹೀಗಿದೆ– ಈ ಸ್ಮಾರಕ ರಚನೆಯ ನಂತರ ಶಿಲ್ಪಿಗೆ ಸಂದಾಯವಾಗಬೇಕಾಗಿದ್ದ ಹಣ ಸಂದಾಯ ಆಗಲಿಲ್ಲವಂತೆ. ನೊಂದ ಶಿಲ್ಪಿ ಅದರ ಸುತ್ತ ಹಂದಿಯ ಚಿತ್ರ ಬಿಡಿಸಿದನಂತೆ!

ಶಿಲ್ಪಿಯ ಜಾಣ್ಮೆ ಮೆಚ್ಚಬೇಕಾದ್ದೇ. ತಾನು ಕೆತ್ತಿದ ಶಿಲ್ಪ ಸೌಂದರ್ಯಕ್ಕೆ ಧಕ್ಕೆಯಾಗದಂತೆ ನೋವನ್ನು ತನ್ನದೇ ಆದ ರೀತಿಯಲ್ಲಿ ಹೇಳಿ 'ಕೊಟ್ಟ ಮಾತಿಗೆ ತಪ್ಪಿ ನಡೆದರೆ ಮೆಚ್ಚದು ಈ ಜಗ' ಎಂದಿದ್ದಾನೆ. ಯೂರೋಪ್ ಪ್ರವಾಸಕ್ಕೆ ಹೋದಾಗ ಇದನ್ನು ನೋಡಲು ಮರೆಯದಿರಿ!

■ ಸೀತಾ ಎಸ್. ನಾರಾಯಣ

